190(24)

CONQUER
GENERAL
SEXUAL
DEBILITIES
WITH
SHAKTI
SUDHA

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಿಂಶಯ್ಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 28 ಸಂಚಿಕೆ 123] ಸೋಮವಾರ 5—2—45 [6 ಪೈ

ಚಿನ್ನ, ಬೆಳ್ಳಿ, ವಜ್ರವೈಢೂರ್ಯಗಳು,
ಅಮೂಲ್ಯಾಭರಣಗಳಿಗೆ ಖಾತ್ರಿ ಗುಣಕ್ಕಾಗಿ

ಡಿ ಸೆಂ ಬಿ ಸೈಡ್

ಮತ್ತು

ಡುಂಡ ಕಂಪೆನಿಯ ಔಷಧಿಗಳು

ಬೇಕಾದವರಿಗೆ

ಕಾಂತರಾಜ್ & ಕೋ.

ರವೆ ಬೀದಿ, ಮೈಸೂರು.

ಮೈಸೂರು ಸಿಟಿ ರೇಷನಿಂಗ್

No. R 5. 705/ 44-45

ಎಲ್ಲಾ ಮೊಹಲ್ಲಾ ಗೋಡೌನುಗಳೂ ಮತ್ತು ಸರ್ಕಾರಿ ಚಿಲ್ಲರೆ ಡಿಪೋಗಳೂ 1945 ನೇ ಇಸವಿ ಫೆಬ್ರವರಿ ಮಾಹೆ 6 ನೇ ತಾರೀಖು ಮಂಗಳವಾರ ಬೆಳಿಗ್ಗೆ ಮುಚ್ಚುವ ಬದಲು ಮಧ್ಯಾಹ್ನ ಮುಚ್ಚಲ್ಪಡುತ್ತವೆ. ಈ ಬದಲಾವಣೆ ಮೇಲ್ಕಂಡ ತಾರೀಖಿಗೆ ಮಾತ್ರ ಅನ್ವಯಿಸುತ್ತದೆ.

ಟಿ. ವಿ. ಕೆಂಪಣ್ಣ

ಮೈಸೂರು ರೇಷನಿಂಗ್ ಆಫೀಸರ್
ತಾ || 5-2-45 ಮೈಸೂರು ಸಿಟಿ.

ಚುನಾವಣೆ

ಮಂತ್ರಿಯಾಗೋ ಮಹಾರಾಯ ಅಂದ್ರೆ
ಕೊಡು ನನಗೆ ಓಟು ಅಂದ
ಸತ್ತಿಸುತ್ತಿ ನುಸ್ತಾಗಿ ತನ್ನ ಓಟು
ತಾನೇ ಮಲೆತ
ಪೋಲಿಂಗ್ ಬೂತಿಗೆ ಹೋಗಿ
ಖಾಲಿ ಪೇಪರ್ ತುರುಕಿದ
ರುಜು ಹಾಕೋದು ಕಲಿತಪನು
ಪೋಟಿಂಗ್ ಪೇಪರಲ್ಲೂ ರುಜುಮಾಡಿದ
ಹತ್ತಲ್ಲೊಬ್ಬನನ್ನು ಅರಸಿ ಅಂದ್ರೆ
ಎಲ್ಲದರ ಹತ್ರವೂ ಕತ್ರಿ ಗುರ್ತು
ಕಾಸು ಕೊಟ್ಟವನಿಗೆ ಮೋಸ
ಕಾಸುಕೊಟ್ಟವನಿಗೆ ಟಾರು.
ಓಟು ಕೊಡೋತನಕ ಅಯ್ಯ !
ಓಟ್ ಕೊಟ್ಟ ಮೇಲೆ ದೈಯ್ಯ !
ಕೊಟ್ಟೆದ್ದು ಒಬ್ಬನಿಗೆ
ಬಚ್ಚಿಟ್ಟೆದ್ದು ಇನ್ನೊಬ್ಬನಿಗೆ
ಮುಖ ನೋಡಿ ಮಣೆ ಹಾಕು.
ಮುಖದ ಮೇಲಿನ ಮುದ್ರೆ ನೋಡಿ
ಓಟ್ ಹಾಕು
ಕಾಗದ ಇಲ್ಲದ ಕಾಲದಲ್ಲಿ ಕಾಗದದ
ಸೋಟೇ ಕೇಳಿದ
ಘನವಾದ ಓಟಿಗೆ ಶೂಕದ ಹುಳಿಯಾಳ .

(ಕೊಂವಂಜಿ)

ಬರ್ಲಿನಿಂದ 30 ಲಕ್ಷ ಜನರು ಓಡುತ್ತಿದಾರೆ

30 ಲಕ್ಷ ಜರ್ಮನರು ಭಯದಿಂದ ಬರ್ಲಿನ್ನಿಂದ ಜರ್ಮನಿಯ ಪಶ್ಚಿಮದ ಕಡೆಗೆ ಓಡಿಹೋಗುತ್ತಿರುವರು. ಕೆಂಪು ಸೇನೆಯು ಬರ್ಲಿನ್ನಿಗೆ ನುಗ್ಗಲು ಅವಕಾಶಕ್ಕೆ ಕಾದಿರುವುದು.

ರಷ್ಯನ್ನರು ಜರ್ಮನಿಗೆ 41 ಮೈಲಿಯಲ್ಲಿರುವ ಬಲವಾದ ಕ್ಯೂಸ್ಟ್ರಿನ್ ಕೋಟೆ ಹಿಡಿದಿರುವರು.

ಜರ್ಮನರು ಬಾಲ್ಟಿಕ್ಕಿನ ಪ್ರಮುಖ ದೇವುಪಟ್ಟಣ ಸ್ವಿಟಿನ್ನನ್ನು ಖಾಲಿ ಮಾಡುತ್ತಿರುವರು.

ಬ್ರಿಟಿಷರು 'ದುಂಜಿನಪಿಂಟ್‌ಬ್ಯಾ' ಎಂಬ ಪತ್ರಿಕೆಯನ್ನು ಜಪಾನೀ ಭಾಷೆಯಲ್ಲಿ ಮುದ್ರಿಸಿ ವಿಮಾನಗಳ ಮೂಲಕ ಬರ್ಮಾ ಸಯಾಂಗಳಲ್ಲಿ ಹಂಚುತ್ತಿರುವರು.

ಯೂರೋಪಿನ ಪುನರ್ರಚನೆಯಲ್ಲಿ ಸ್ವೀನು ಫಾಸಿಸಂ ತತ್ವವನ್ನನುಸರಿಸುವುದರಿಂದ, ಜನರಲ್ ಫ್ರಾಂಕೆಗೇನನ್ನು ಓಡಿಸಲು ಪ್ರಯತ್ನ ನಡೆಸಬೇಕೆಂದು ಬ್ರಿಟಿಷ್ ಅಮೇರಿಕಾ ಸರಕಾರಗಳಿಗೆ ಸ್ಟಾಲಿನ್ ಬರೆದಿರುವನು.

ಸಂಯುಕ್ತ ಪ್ರಾಂತ್ಯಗಳಿಂದ ಯಾವ ದನಕರುಗಳನ್ನೂ ತಕ್ಕ ರಹದಾರಿಯಿಲ್ಲದೆ ಹೊರಗೆ ಸಾಗಿಸಬಾರದೆಂದು ಗೌರ್ನರರ ಅಪ್ಪಣೆಯಾಗಿದೆ.

ರಷ್ಯಾ ಯುದ್ಧೋಪಕರಣಗಳನ್ನು ತರಿಸುವ ಸಲುವಾಗಿ ಬ್ರಿಟನ್ನನ್ನು 50 ವರ್ಷ ದೀರ್ಘ ಕಾಲದವಧಿಯ 750 ಮಿಲಿಯ ಪೌಂಡು ಸಾಲಾ ಕೇಳಿದ್ದನ್ನು ಬ್ರಿಟನ್ನು ನಿರಾಕರಿಸಿದ್ದರಿಂದ, ಸ್ಟಾಲಿನ್ನರು ಅಮೇರಿಕಾವನ್ನು ಲೆಂಡ್ ಎಂಡ್ ಲೀಜ್ ಮೇಲೆ ಸಾಲಾ ಕೇಳುವವರಾಗಿರುವರು.

' ಜಪಾನುಶಾಂತಿ ಬಿಕ್ಷೆ ಬೇಡಿದೆ ' ಎಂದು ಒಂದು ಸ್ವಿಸ್ ವಾರ್ತೆ.

ಉತ್ತರ ದಕ್ಷಿಣ ಅಮೇರಿಕಾ, ಬ್ರಿಟಿಷ್ ದ್ವೀಪಗಳು, ಇವೆಲ್ಲಾ ಸಂಯುಕ್ತ ಅಮೇರಿಕಾಕ್ಕೆ ಸೇರಬೇಕು ; ಇಂಗ್ಲೆಂಡು ಎಂದಿದ್ದರೂ ಸಣ್ಣ ರಾಜ್ಯವಾಗುವುದು ; ಯೂರೋಪಿನ ಮೂಲೆಯಲ್ಲಿರುವುದು ; ಇದರಿಂದ ಮುಂದೆ ಮಹಾ ಕೊಂದರೆಗಳೆಲ್ಲಾ ಮಾಯವಾಗುವುದು, ಎಂದು ಸೆನೇಟರ್ ಲಾಂಗರ್‌ವರು ಅಮೆರಿಕಾ ಸೆನೇಟಿನಲ್ಲಿ ಒಂದು ಪ್ರಶ್ನೆ ಕೇಳಿರುವರು.



ರಣ್ಜೀತ್ ಟಾಕೀಸಿಗೆ ಬರಲಿರುವ ಪಗ್ಲಿ ಚಿತ್ರದ ಒಂದು ದೃಶ್ಯ

ನಾಜಿ ಕವಿ ಹೆಸ್ಸಿಜ್ ಹಟ್ಲರ್ ' ನಾವುವು ಈಗ ಕುಸಿದು ಬಿದ್ದರೆ, ನಮ್ಮ ಜೊತೆಯಲ್ಲಿ ಪ್ರಪಂಚವೇ ಕುಸಿದು ಬೀಳುವುದು ' ಎಂದು ಹೇಳಿರುತ್ತಾನೆ.

ಂ ಂ

ಸಂ' ವದಾಂಪತ್ ಸಿಂಗಾನಿಯಾ ಒಬ್ಬ ಮಹಾ ವರ್ತಕನು. ರಾಜರೂ ಮಂತ್ರಿಗಳೂ ಈತನ ಮನೆಯಲ್ಲಿ ಊಟ ಮಾಡಿರುವರು. ಈತನು ತನ್ನ ಬಟ್ಟೆ ಮಿಲ್ಲಿನಲ್ಲಿ ಕಲ್ಲಿಜ್ಜಲು ಮುಚ್ಚಿಟ್ಟಿದ್ದನೆಂದು ಈತನಿಗೆ ಕಾನ್ಪುರದಲ್ಲಿ ಹತ್ತು ಸಾವಿರ ರೂ. ಜುಲ್ಮಾನೆಯಾಯಿತು.

ಉಬ್ಬಸಕ್ಕೆ ಚಿಕಿತ್ಸೆ

ಚಿತ್ರಕೂಟ್ ಉಬ್ಬಸ ನಿವಾರಣೆ ಮಾಡಲು ಆಧಾರಣ ಶಕ್ತಿಯ ಎಳ್ಳಸಿಧ್ ಪುಡಾಕ್ಕರಿಂದ ದೊರೆತಿರುವ ಮೂಲಿಕೆ. ತಾ || 26-2-45 ರಲ್ಲಿ ಸೇವಿಸಬೇಕು. ಒಂದು ಹೊತ್ತಿನ ಸೇವನೆಯಿಂದ ಉಬ್ಬಸ ನಿವಾರಣೆಯಾಗುವುದು. ಕ್ರಯ ರೂ. 3-6-0.

Manager D. D. Sharma
Sant Sewa Ashrama
Chitrakut Post (U. P.)

ವಾರ್ತಾತರಂಗ

ಬರ್ಲಿನ್ನಿನ ಕೆಥಲಿಕ್ ಸೆರಕಾರವನ್ನು ಸ್ಥಾಪಿಸಿದ್ದರು ಈಗ ರಷ್ಯಾದಲ್ಲಿ ಒಂಧಿತರಾಗಿರುವ ಜರ್ಮನ್ ಸೇನಾಪತಿಗಳಿಂದ ನಡೆಸುವವರಾಗಿರುವರು.

ಲಂಡನ್ನಿನಲ್ಲಿ ಭಾರತೀಯರು ಇರುವುದೇ ಕಮ್ಮಿ. ಕಳೆದ ವಾರ 3 ಕಡೆ ಗಳಲ್ಲಿ ಸಭೆ ನಡೆದು, ಯಾವ ಸಭೆಯಲ್ಲೂ 100 ಜನಕ್ಕಿಂತ ಹೆಚ್ಚು ಮಂದಿ ಸೇರಲಿಲ್ಲ. ಒಂದು ಕಡೆ ಎದ್ದುಬದರು ಬ್ಯಾಗ್ಲೆಯಲ್ಲಿ ಸಭೆ ನಡೆಯಿತು.

ಬ್ರಿಟಿಷ್ ಮಕ್ಕಳು ಗಟ್ಟಿಮುಟ್ಟಾಗಬೇಕಾದರೆ ಈ ರೀತಿ ಮಾಡಬೇಕೆಂದು ಆಂಗ್ಲೇಯ ಡಾಕ್ಟರು ಹೇಳುವರು.— ಬಸರಿ ಹೆಂಗಸರ ಹಾಗೆ ಪುಷ್ಟಿಕರವಾದ ಆಹಾರ ತೆಗೆದುಕೊಳ್ಳಿ. ಆಗಾಗ್ಗೆ ಶಾಡ್‌ಔಷಧ ಆಯಿಲನ್ನು ತೆಗೆದುಕೊಳ್ಳಿ. ಪ್ರತಿ ದಿವಸವೂ ಕಿತ್ತಲೇ ಹಣ್ಣು ತಿನ್ನಿ. ಆಗಾಗ್ಗೆ ಹೆಲ್ತ್ ಸೆಂಟರಿಗೆ ಹೋಗಿ ಪರೀಕ್ಷಿಸಿಕೊಳ್ಳಿ. ಹೀಗೆ ಮಾಡಿದರೆ ನಿಮಗೆ ಹುಟ್ಟುವ ಮಕ್ಕಳು ದೃಢಕಾಯ ರಾಗಿಯೂ ಆರೋಗ್ಯವಾಗಿಯೂ ಆಗುವರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲ್ ಸಂಬಂಧದಲ್ಲಿ ಪಸ್ಕಗಿರಿಯಾಗಿ ಚಾಮಿಯಾನ ಮೇಲೆ ಜಡಲ್ಬಟ್ಟಿರುವ ತ್ಯಾಗರಾಜ ಭಾಗವತರ್ ಮತ್ತು ಎಸ್. ಕೃಷ್ಣನ್ನರ ಜಾಮೀನು ವಜಾ ಮಾಡಬೇಕೆಂದು ಸರ್ಕಾರಿ ವಕೀಲರು ಹೈಕೋರ್ಟಿನಲ್ಲಿ ವಾದಿಸಿದರು. ವಿಚಾರಣೆ ತಾ || 9 ಕ್ಕೆ ಇಡಲಾಗಿದೆ.

ಕಸ್ತೂರಿ ಬಾ ನಿಧಿಯೆಂದು ಹಿಂದೂಗಳು ಹೆಚ್ಚು ಹಣವನ್ನು ಸೇರಿಸಿರು ವರು. ಇದು ಮುಸ್ಲಿಮರನ್ನು ಎದುರಿಸಲು ಸಲುವಾಗಿ ಏರ್ಪಾಡಾದ ನಿಧಿ ಎಂದು ನವಾಬ್ ಜಾಡ ಲಿಖ್ಯಾತ್ ಅಲಿ ಖಾನರು ತಿರುನೆಲ್ವೆಲ್ಲಿಯಲ್ಲಿ ಹೇಳಿರುವರು. ಇವರು ಲೀಗ್ ಸೆಕ್ರೆಟರಿ.

ಬರ್ಲಿನ್ ಪತನವಾದರೂ ಯುದ್ಧ ನಿಲ್ಲುವುದಿಲ್ಲವಂತೆ. ಸಾಧ್ಯವಿಗಳು ಬೆಟ್ಟಗುಡ್ಡಗಳಲ್ಲಿ, ಭೂಮಿಯೊಳಗೂ, ತಟಸ್ಥ ರಾಜ್ಯಗಳಲ್ಲಿ ಸೇರಿಕೊಂಡು ಗೆರಿಲಾ ಯುದ್ಧ ಮಾಡುತ್ತಾ, ಪ್ರಪಂಚದ 3 ನೇ ಮಹಾಯುದ್ಧಕ್ಕೆ ಪೀಠಿಕೆ ಹಾಕುವರೆಂದು ಅಮೇರಿಕನ್ನರ ಅಭಿಪ್ರಾಯ.

ಜನವರಿ 15 ರಲ್ಲಿ ಮಾಂಟಿರೀಲ್ (ಅಮೇರಿಕಾ) ನಲ್ಲಿ ಇಂಡೂರು ಮಿ ಹಾರಾಜರನ್ನು ಲಗ್ನವಾಗಿದ್ದ ಅಮೇರಿಕ ಮಾಗ್ಯೂರೆಟ್ ಲಾಲೆರ್ ಹೋ ಳ್ಕರ್ ಒಬ್ಬ ಅಂಚೆ ಜವಾನನನ್ನು ಮದುವೆಯಾದಳು. ಇವನು ಹಿಂದೆ ದಂಪತಿ ಹೋಟ್ಕರಿಗೆ ಕಾಗದ ಬಟವಾಡೆ ಮಾಡುತ್ತಿದ್ದ. ಇವಳಿಗೆ ಇದು 3 ನೇ ಲಗ್ನ.

ಹಿಟ್ಲರ್ ತನ್ನ ಅಧಿಕಾರ ಸ್ವೀಕಾರದ 12 ನೇ ವಾರ್ಷಿಕೋತ್ಸವದಂದರ್ಭ ದಲ್ಲಿ ' ಜರ್ಮನರು ಕೊನೆಯ ಸ್ಯಯತ್ನ ನಡೆಸಿ ಅಮೈರುವರೆಗೂ ನಿಲ್ಲಬೇಕೆಂದೂ ಜರ್ಮನ್ ಯುವತಿಯರು ತಮ್ಮ ಶಕ್ತಿ ಸಾಹಸವನ್ನೆಲ್ಲಾ ಉಪಯೋಗಿಸಿ, ಶತ್ರು ವನ್ನು ಎದುರಿಸಬೇಕೆಂದೂ, ಎದುರಿಸುವ ನಾಜೀ ಶಕ್ತಿಯೇ ಜಯಿಸುವ ಶಕ್ತಿ ತನಗಿದೆಯೆಂದೂ ಮುಂತಾಗಿ 16 ನಿಮಿಷ ಭಾಷಣ ಮಾಡಿದನು.

ಕೇಂದ್ರ ಸರಕಾರದ ರೂ. 100 ನಾಲ ಪತ್ರವನ್ನು ಕೊಳ್ಳುವವರಿಗೆ ಬಡ್ಡಿ ಬದ ಲು 6 ತಿಂಗಳಿಗೆ ಒಂದಾವರ್ತಿ ಲಾಟರಿ ಎತ್ತುವರು. ಈಚೆಗೆ ಎತ್ತಿದ ಲಾಟರಿ ಯಲ್ಲಿ ಮೊದಲನೆ ಬಹುಮಾನವಾದ 50 ಸಾವಿರ ರೂ. ಫೆಡರಲ ಕೋರ್ಟಿನ ಆಡ್ವೊಕೇಟ್ ಜನರಲ್ಲರಪಪ ಪುಕ್ಕಳು ಶ್ರೀಮಂತರಿಗೆ ದೊರೆಯಿತು. ಹೊಳೆಯು ನೀರು ಹೊಳೆಗೆ ಹಾನೇ ! ಹಿಂದೆ ಮದರಾಸಿನ ವೈಟ್‌ವೆಲೇಡ್ಲಾ ಕಂಪೆನಿ ಯಲ್ಲಿ 1 ರೂ. ಸಾವಿರಾರು ಕೊಂಡ ಲಾಟರಿಯಲ್ಲಿ (5 ನೇ ಜಾರ್ಜ್ ಕಿರೀ ಟಕ್ಕೆ) ಹೈದರಾಬಾದಿನ ಯುವರಾಣಿಯವರಿಗೆ ಮೊದಲನೆ ಬಹುಮಾನ ಬಂದಿತು, ಆ ಬಹುಮಾನ ಹೈದರಾಬಾದಿನಿಂದ ಲಂಡನ್ನಿಗೆ ವಿಮಾನದಲ್ಲಿ ಹೋಗಿ ಬರು ವುದು. ಅಲ್ಲಿಯು ಉತ್ತಮ ಹೋಟಲಿನಲ್ಲಿ ಊಟ. ಉತ್ತಮ ಜಾಗದಲ್ಲಿ ನಿಂತು ಉತ್ಸವ ನೋಡುತ್ತಾರೆ.

ನಿಮ್ಮಲ್ಲಿ 1934 ವರ್ಷದ ಬರೆಯದ ಡೈರಿ ಇದ್ದರೆ ಅದನ್ನು ಈ ವರ್ಷ ಉಪಯೋಗಿಸಿ. ದಿವಸ, ವಾರ, ತಿಂಗಳು ಎಲ್ಲಾ ಒಂದೇ.

ಇಮವರೆಗೆ ಮನುಷ್ಯನ ದೇಹದಲ್ಲಿರುವ ಕ್ರಿಮಿಗಳ ಫೋಟೋವನ್ನು 1000 ಅಧಿಕ ಪ್ರಮಾಣದಲ್ಲಿ ತೆಗೆಯಬಹುದಾಗಿತ್ತು. ಈಗ ಅಮೇರಿಕಾದಲ್ಲಿ 80000 ದಿಂದ 1 ಲಕ್ಷ ಪ್ರಮಾಣದ ಅಧಿಕದಲ್ಲಿ ಫೋಟೋ ತೆಗೆಯುವದನ್ನು ಕಂಡು ಹಿಡಿದಿರುವರು. ಇದರಿಂದ ಅನೇಕ ಖಾಯಿಲೆಗಳ ಕ್ರಿಮಿಗಳು ಹೆಚ್ಚು ಚೆನ್ನಾಗಿ ಕಂಡು ಚಿಕಿತ್ಸೆಗೆ ಅನುಕೂಲವಾಗುವುದು.

ಜರ್ಮನ್ ಹಾರುವ ವಿಮಾನಂಬನ್ನು ಫ್ರೆಂಚ್ ವಿಜ್ಞಾನಿಯು ಕಂಡುಹಿಡಿದು ಜರ್ಮನರಿಗೆ ಅದರ ಗುಟ್ಟನ್ನು ತಿಳಿಸಿದನು. ಫ್ರೆಂಚರು ಇವನನ್ನು ದಸ್ತಗಿರಿ ಮಾಡಿರುವರು.

ಕಾಂಗ್ರೆಸ್ ಮತ್ತು ಭಾರತೀಯರು ಜಪಾನಿನ ಪರದವರೆನ್ನುವುದು ತಪ್ಪು ಎಂದು ಲಂಡನ್ನಿನಲ್ಲಿ ಫ್ರಾಂಕ್ ಮೋರಾರ್ಜಿ ಎಂಬ ಸುಪ್ರಸಿದ್ಧ ಚಿತ್ರಪಟಗಾ ರನು ಒಂದು ಸಭೆಯಲ್ಲಿ ಹೇಳಿದನು.

ಬೈಸಿಕಲ್ ರಬ್ಬರ್ ಟ್ಯೂಬ್‌ಗಳಿಗೆ ರೊಧಿಸಿಯಾದಲ್ಲಿ ಅಭಾವವಾಗಿದೆ, ಇಲಿಗಳ ಬಾಲದಿಂದ ಟ್ಯೂಬುಗಳನ್ನು ಮಾಡುತ್ತಿರುವರಂತೆ. ಬೆಂಗಳೂರು ಪೌರಸಭೆಯವರು ಇತ್ತ ಗಮನಿಸುವರೇ.

ಮದರಾಸಿನಲ್ಲಿ ತಾಂಬರ್ಮ ಸ್ಟೇಷನ್ನಿನಲ್ಲಿ ಶ್ರೀ ಶಂಕರಪಿಳ್ಳೆಯವರು ಗಾಡಿಗಳಲ್ಲಿ ಕಸಗುಡಿಸುತ್ತಿದ್ದುದನ್ನು ನೋಡಿ ಪ್ರಯಾಣೀಕರು ಬೆರಗಾದರು. ವಿಚಾರಿಸುವುದಕ್ಕಲ್ಲಿ ರೈಲ್ವೇ ಅಧಿಕಾರಿಗಳು ಗಾಡಿಗಳಲ್ಲಿ ಕಸ ಗುಡಿಸುವುದಿಲ್ಲ ಇದನ್ನು ಸರಿಪಡಿಸುವವರೆಗೂ ತಾವು ಪ್ರತಿನಿತ್ಯವೂ ಕಸಗುಡಿಸುತ್ತೇವೆಂದು ಹೇಳಿದರು.

ಜಯವು ಚರ್ಚಿಲ್ಲರ, ಇತರ ಪಾರ್ಟಿಗಳ ಸಹಾಯದೊಡನೆಯೂ ದೊರೆ ಯುವುದಿಲ್ಲ. ಕನ್ಸರ್ವೆಟಿವ ಪಾರ್ಟಿಯವರಿಗೆ ಮನಸ್ಸು ಒಲದಾಗ ಇತರರ ರನ್ನು ಓಡಿಸುವರು. ಮಿ || ಚರ್ಚಿಲ್ಲರು ತಮ್ಮಲ್ಲಿ ವಿಶ್ವಾಸವಿದೆಯೆಂದು ಒಟ್ಟು ತೆಗೆದುಕೊಳ್ಳುತ್ತಿರಲಿ. ರಷ್ಯನ್ನರು ಮುಂದುವರಿಯುತ್ತಿರಲಿ. — ಎಂದಿದಾಗಿ ಪಾರ್ಲಿಮೆಂಟಿನಲ್ಲಿ ಸದಸ್ಯ ಪಿ.ವಿ.ಎಲ್ ಹೇಳಿದರು.

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಪಿತೃಣದಂತೆ ಮಾಡಿಕೊಳ್ಳಿರಿ —

ನಿಮಗೆ ಆರೋಗ್ಯಕರವಾದ, ಸಂತಸ ದಾಯಕವಾದ ಊಟ, ರುಚಿಕರ ವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪವಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆ ಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಸಲಂಗಳಲ್ಲಿ ಎಲ್ಲಾ ವ್ಯಾಪಾರಿಗಾರರಲ್ಲೂ ಮತ್ತು ಈ ಕೆಳಗಿನ ವಿಳಾಸದಾರರಲ್ಲೂ ದೊರೆಯುವುದು.

ವಲ್ಲಭ ದಾಸ್ ತೇಜ್ ಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಿಗಾರರು,

14 ಗೋವಿಂದಪ್ಪ ನಾಯಕ್ ಬೀದಿ, ಜಿ.ಟಿ. ಮದರಾಸ್.

ಈ ವಾರ ನಿಮ್ಮ ಗ್ರಹಗತಿಗಳು ಹೇಗಿವೆ ?

(ಓಂ ಜ್ಯೋತಿಷ್ಕರಿಂದ)

ಮೇಷ

ನಿಮಗೆ ಸಮಯ ಇದು. ಎಲ್ಲಾ ವಿಷಯಗಳಲ್ಲಿಯೂ ವಿಜಯವನ್ನು ಗಳಿಸುವಿರಿ. ಧೈರ್ಯದೊಡನೆ ಕಾರ್ಯ ನಿರ್ವಾಹಣದಲ್ಲಿ ಮುನ್ನುಗ್ಗಿರಿ. ಆರ್ಥಿಕ ಮಾನಸಿಕ ವಿಷಯಗಳಲ್ಲಿಯೂ ಶುಭ ಸೂಚನೆಯೇ ಇದೆ.

ವೃಷಭ

ಮಿಶ್ರ ಫಲ. ಹಣದ ವಿಷಯದಲ್ಲಿ ಮುಗ್ಗಟ್ಟು. ಮನೋವ್ಯಾಕುಲತೆ, ಅಪಯಶಸ್ಸು ಹಿರಿಯರೊಡನೆ ಕಲಹ ಕೈಗೊಂಡ ಕಾರ್ಯಗಳಲ್ಲಿ ವಿಘ್ನಗಳು ಈ ತೊಂದರೆಗಳು ಕಾಣಬರುವವು. ಅದರೂ ಹೆದರಬೇಡಿ ; ಜಾಗರೂಕತೆಯಿಂದ ವರ್ತಿಸಿರಿ.

ಮಿಥುನ

ಸಾಟ್ರಿಗಳಿಗೆ ಈ ವಾರ ಕೈಹಾಕ ಬೇಡಿ. ನಷ್ಟವಾಗಬಹುದು. ಜ್ಯೋತಿ. ಹಿತಚಿಂತಕರ ವಿಷಯದಲ್ಲಿ ಮೈತ್ರಿಯಿಂದ ವರ್ತಿಸಿರಿ. ಖರ್ಚು ಹೆಚ್ಚಾಗುವುದು. ಆದಾಯ ಕಮ್ಮಿಯೆಂದೇ ಹೇಳಬಹುದು.

ಕರ್ಕಾಟಕ

ನಿಮ್ಮ ಕಷ್ಟಗಳು ದೂರವಾಗುವ ಸಮಯವು ಸನಿಹಾಯಿಸಿದೆ. ಆದರೆ ದೈವೀಕ ಭಾವನೆಯನ್ನು ಹೆಚ್ಚಾಗಿಟ್ಟುಕೊಂಡು ನ್ಯಾಯಸಥದಲ್ಲಿ ಚರಿಸಬೇಕು. ಸ್ವತಂತ್ರತೆಯಿಂದ ಕೆಲಸ ಮಾಡುವುದು ಉತ್ತಮವೆಂದು ನೆನಪಿನಲ್ಲಿಡಿ.

ಸಿಂಹ

ನಡೆನುಡಿಗಳಲ್ಲಿ ವಿನಯವನ್ನು ಸಾಧಿಸಿ. ಆಗ ಜಯವಾದೀತು. ಸಮಾಧಾನ ಚಿತ್ತರಾಗಿರಿ. ಕೆಲವರಿಂದ ಕಾರಣವಿಲ್ಲದೆ ಕೆಲವರಿಂದ ಕಷ್ಟಗಳು ಪ್ರಾಪ್ತವಾಗುವ ಸಂಭವವುಂಟು. ಜಾಗ್ರತೆ.

ಕನ್ಯಾ

ಆರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದಿರಿ. ಯಾವ ತಂಟೆಗೂ ಹೋಗದೆ ತಡಸ್ಥ ಭಾವದಿಂದಿರಿ. ಹಿರಿಯರ ಆಶ್ರಯದಿಂದ ಲಾಭವಾಗುವುದು. ಉದ್ಯೋಗದಲ್ಲಿ ಲಾಭಕ್ಯಾಪ್ತಿಯ ಅವಕಾಶವೂ ಉಂಟು.

ತುಲಾ

ಆದಾಯಕ್ಕಿಂತ ವ್ಯಯವು ಹೆಚ್ಚಾಗಿರುವುದು. ಮನಸ್ಸು ಚಂಚಲವಾಗಿರುತ್ತದೆ. ಕಾರ್ಯಗಳಲ್ಲಿ ವಿಘ್ನ ಫಲ ಕಾಣಬರುವುದು. ಧನಲಾಭವು ಅಷ್ಟಾಗಿ ನೋಹಿತವಾಗಿರುವುದಿಲ್ಲ.

ವೃಶ್ಚಿಕ

ಅಪವಾದಗಳ ಪಾಲಾಗುವ ಸಂಭವವುಂಟು. ಆದರೂ ಹೆದರದೆ ಧೈರ್ಯದಿಂದ ನಡೆಯಿರಿ. ತಾಪತ್ರಯಗಳು ಹೆಚ್ಚುವವು. ದುಷ್ಟಜನರಿಂದ ದೂರರಾಗಿರಿ. ಹೊಸ ಕೆಲಸಗಳಿಗೆ ಕೈಹಾಕ ಬೇಡಿ.

ಧನು

ಇದು ನಿಮ್ಮ ಶ್ರೇಯಸ್ಸಿನ ವಾರ. ಮನೋಪ್ಯಾಖ್ಯಗಳು ಪ್ರಾಪ್ತವಾಗುವ ವಾರ. ಅಧಿಕಾರದಲ್ಲಿ ಮರ್ಯಾದೆಯನ್ನು ಪಡೆಯುವಿರಿ. ಆದರೆ ಎಲ್ಲಾ ಕೆಲಸಗಳನ್ನೂ ಎಚ್ಚರಿಕೆಯಿಂದ ಮಾಡಿ.

ಮಕರ

ಬಹಳ ಅನುಕೂಲಗಳು ಒದಗುವ ಸಮಯವಿದು. ಸುಖಸಂತೋಷಗಳಿಗೆ ತೊಂದರೆ ಇರುವುದಿಲ್ಲ. ವ್ಯಾಪಾರದಲ್ಲಿ ಲಾಭ ಮತ್ತು ಮಾನ್ಯತೆಸಳುಂಟು. ಆರೋಗ್ಯ ಸಮಾಧಾನಕರ

ಕುಂಭ

ಹಿಂದಿನ ವಿಘ್ನಗಳು ಕಡಮೆಯಾಗುವುವು. ಆದರೆ ಮಾನಸಿಕ ಸೌಖ್ಯ ಕಡಮೆ. ಗೃಹದಲ್ಲಿರುವವರ ಆರೋಗ್ಯದ ಕಡೆ ಲಕ್ಷವನ್ನಿಡಿ. ನಿಮ್ಮ ಉದ್ಯೋಗ ವ್ಯಾಪಾರಗಳಲ್ಲಿ ಜಾಗ್ರತೆಯಿಂದಿರಿ

ಮೀನ

ಮಿಶ್ರಫಲಗಳ ವಾರ. ಧನಲಾಭ ಕಡಮೆ. ದೈವಿಕ ವಿಷಯದಲ್ಲಿ ಮಾನಸವನ್ನು ನೆಟ್ಟಿಗೊಳಿಸಿದಲ್ಲಿ ಸೌಖ್ಯವುಂಟು ಸಂತೋಷವುಂಟು. ಕಷ್ಟಗಳಿಂದ ಪಾರಾಗುವಿರಿ.

ಲಗ್ನಕಾಲದಲಿ ರೇಷ್ಮೆ ಸೀರೆ ಅವಶ್ಯಕವಾದುದರಿಂದ ಭಾರತದಿಂದ ಸಿಂಹಳ ದ್ವೀಪಕ್ಕೆ ರೇಷ್ಮೆಬಟ್ಟೆ ಅಮದು ಮಾಡದಿರುವುದರಿಂದ, ಸಿಂಹಳದ್ವೀಪದ ಹಿಂದೂಗಳಿಗೆ ಕಷ್ಟವಾಗಿದೆಯೆಂದೂ, ಇದನ್ನು ತಪ್ಪಿಸಬೇಕೆಂದೂ ಅಲ್ಲಿಯ ನ್ಯಾಯ ವಿಧಾಯಕ ಸಭೆಯಲ್ಲಿ ಒಬ್ಬರು ಪ್ರಶ್ನೆ ಕೇಳಿರುತ್ತಾರೆ.

ಂ ಂ

ದ. ಆಫ್ರಿಕಾದಲಿ ರೇಷನಿಂಗ್ ಮಾಡುವ ಯೋಚನೆ ಇದೆ. ಂ

ಕಳೆದವಾರ

ಕರಾಚಿಯಲ್ಲಿ ಗಾಂಧೀಜಿಯ ವಿರ ಪ್ರತಿಮೆ ತಯಾರಾಗಿದೆ. ಜ್ಞಾಪಿಸ್ಸಿನಲ್ಲಿಡಲು ಅಲ್ಲಿನ ಪೌರಸಭೆಯವರನ್ನು ಕೇಳಲಾಗಿದೆ,

ಂ ಂ

ಕಾಂಗ್ರೆಸ್ ಬಾವುಟವನ್ನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕಟ್ಟಡದ ಮೇಲೆ ಇಡಲಾಗಿದೆ.

ಂ

ಜರ್ಮನರು ಒಂದು ಸೂತನ ಸಬ್ ಮೆರಿನ್ ತಯಾರಾಡಿರುವರು. ಇದು ನೀರಿನಲ್ಲೇ 20-30 ದಿವಸ ಇರಬಹುದಂತೆ.

ಂ ಂ

ಭಾರತದ ನಾನಾ ಭಾಗಗಳ ಪ್ರಜೆಗಳ ಬೇಡಿಕೆಗೆ ಮನ್ನಣೆ ಕೊಟ್ಟು ಮಧ್ಯ ಪ್ರಾಂತ್ಯ ಮತ್ತು ಬೀರಾರು ಗೌರ್ನರರು ಅಸ್ಪಿ ಮತ್ತು ಚೀಮೂರು ಮೊಖದ್ದಮೆಯ 8 ಮಂದಿಗೆ ಮರಣದಂಡನೆ ವಜಾ ಮಾಡಿ ಜೀವಾವಧಿ ಗಡಿಪಾರು ಶಿಕ್ಷೆಯನ್ನು ವಿಧಿಸಿರುವರು.

ಂ ಂ

ಅನೆಲು ಕ್ರಯಕ್ಕೆ ಶೇಕಡ 500 ಹೆಚ್ಚಾಸಿ ಬೆಲೆಗೆ ಕಖ್ಖಣ ಮಾರಿದರೆಂದು 4 ಜನರಿಗೆ ತಲಾ ರೂ 200ರ ಜುಲ್ಮಾನೆ ಯಾಯಿತು.

ಂ ಂ

ಚೀನಾದಲ್ಲಿ ಒಂಟೆ ಚಕ್ಕಡ ಗಾಡಿ ಇದೆ. ಗ್ರಾಮಸುಧಾರಣಾ ಕಾರ್ಯಕ್ರಮದಲ್ಲಿ ಇಂತಹವನ್ನೇ ಜೊಂಬಾಯಿ ಸರಕಾರವು ಉಪಯೋಗಿಸಲು ತೀರ್ಮಾನ ಮಾಡಿದೆ.

ಂ ಂ

ಗಾಂಧೀಜೀ ಫೋಟೋನನ್ನು ಮೆರವಣಿಗೆ ಮಾಡುವುದು ಅಪರಾಧವಲ್ಲವೆಂದು ಮದರಾಸು ಹೈ ಕೋರ್ಟಿನಲ್ಲಿ ತೀರ್ಪಾನವಾಗಿ ಇಬ್ಬರು ಬಾಲಕರಿಗೆ ಖುಲಾಸಾಯಿತು.

ಂ ಂ

ಜರ್ಮನಿಯಿಂದ ಬಂದ ವಾರ್ತೆಯಂತೆ, ಎರಡು ಜರ್ಮನ್ ಎಂಲಿಟರಿ ವಿಮಾನಗಳಲ್ಲಿ ಎಂಟು ಮಂದಿಗೆ ಬೇಕಾದಷ್ಟು ಆಹಾರ. 40 ಗಂಟೆ ಹೋಗಲು ಸಾಕಷ್ಟು ಪೆಟ್ರೋಲು ಸಮೇತ ರಭಸದಿಂದ ಹೊರಡಲು ಬೆವೇರಿಯಾದಲ್ಲಿ ಸಿದ್ಧವಾಗಿತ್ತು. ಆ ವಿಮಾನಗಳ ಸುತ್ತಲೂ ಒಲವಾದ ಕಾವಲಿಟ್ಟಿದೆ. ಪ್ರಯಾಣೀಕರು ಯಾರು ? ಎಲ್ಲಿಗೆ ? ಉದ್ದೇಶವೇನು ? ಈ ವಿಷಯಗಳು ಇನ್ನೂ ಪತ್ತೆಯಾಗಿಲ್ಲ ಎಂದು ಜಾರಿಚ್ಚಿನ ಡೇಲಿ ಬಾತ್ಮೀದಾರರು ತಂತೀವಾರ್ತೆ ಕಳುಹಿಸಿರುತ್ತಾರೆ.

ಕಸ್ತೂರಿ ಬಾ ನಿಧಿಗೆ ಈಗ 124 ಲಕ್ಷ ರೂ. ಶೇಖುವಾಗಿದೆ.

ಂ ಂ

ಲಕ್ನೋದಲ್ಲಿ ಬಟ್ಟೆಗಳಿಗೆ ಅಭಾವವಾಗಿ ನೆಲದಲ್ಲಿ ಹುಡಗಿದ್ದ ಹೆಣದ ಬಟ್ಟೆಗಳನ್ನು ರಾತ್ರಿ ಕಾಲದಲ್ಲಿ ತೆಗೆಯುತ್ತಿರುವರಂತೆ.

ಂ ಂ

ಬರ್ಲಿನ್ನಿನಲ್ಲಿ ಈಗ ನಮ್ಮ ಮೈಸೂರು ನಗರದಲ್ಲಿನ ಪತ್ರಿಕೆಗಳಂತೆ ಎರಡು ಪುಟದ (3 ಕಾಸು ?) ಪತ್ರಿಕೆಗಳು ಹೊಂಡಲು ಪ್ರಾರಂಭವಾಯಿತು.

ಂ ಂ

ಮದರಾಸಿನ ಸರ್ಕಾರಿ ಕಛೇರಿಯಲ್ಲಿ 0-0-9 ರೂ. ನ ಒಂದು ಸರ್ವಿಸ್ ಸ್ಟಾಂಪು ಗೈರಾವಿಲೆಯಾಗಿದೆ ಪೋಲೀಸರು ಪತ್ತೆ ಮಾಡಬೇಕೆಂದು ಕಛೇರಿಯ ಮುಖ್ಯಸ್ಥರು ಕೇಳಿಕೊಂಡಿರುತ್ತಾರೆ.

ಂ ಂ

ಬ್ರಿಟನ್ನಿನ ಮುಂದಿನ ವಿಹಾಜುನಾವಣೆಗೆ ಲಿಬರಲ್ ಪಾರ್ಟಿಯವರು 30 ಲಕ್ಷ ರೂ. ಚಂದಾ ಎತ್ತವರು. ಇಷ್ಟು ಭಾರಿ ಮೊಬಲಗನ್ನು ಇದುವರೆವಿಗೆ ಚುನಾವಣೆಗೆ ಶೇಖರಿಸಿರುವುದಿಲ್ಲ.

ಂ ಂ

ನ್ಯೂಯಾರ್ಕಿನಲ್ಲಿ ಲುಕುಲಸ್ ಕಂಪೆನಿಯವರು ಚಟ್ಟಿಯನ್ನು ಮಾಡುವ ವಿಧಾನವನ್ನು ಕಲಿತು. ಅಲ್ಲಿ ಬರೀ ಚಟ್ಟಿಯನ್ನು ಮಾಡಿ ಮಾರುತ್ತಿರುವರು. ಇದಕ್ಕೆ ಕಲ್ಕತ್ತಾ ಕ್ಲಬ್ ಎಂದು ಹೆಸರು.

ಂ ಂ

ಸಿಮ್ಲಾದಲ್ಲಿ ಯೂರೋಪಿಸವರಿಗೂ, ರಿಜಿಸ್ಟರ್ ಮಾಡಿಕೊಂಡಿರುವ ಭಾರತೀಯರಿಗೂ ಮಾತ್ರ ಮೊಟ್ಟೆ ಮಾರಬೇಕೆಂದು ಆಜ್ಞೆಯಾಗಿದೆ. ಕೇಂದ್ರಸಭೆಯಲ್ಲಿ ಈ ವಿಷಯವಾಗಿ ಚರ್ಚೆಯಾಗುತ್ತೆ

ಂ ಂ

ಜಯಪುರದ ಪ್ರಧಾನ ಮಂತ್ರಿ ಸರ್ ವಿಜಾರ್ಥರವರ ಪತ್ನಿ ಲೇಡಿ ವಿಜಾರ್ಥರವರು ಬೆಂಗಳೂರಿನಿಂದ ಮುಂಬಯಿಗೆ ಒಂದು ರೈಲಿಳಿದು ತಮ್ಮ ಸ್ನೇಹಿತರ ಸಂಗಡ ಮಾತನಾಡುತ್ತಿದ್ದರು. ಸೇವನಿದ್ದ ಸರ್ವೆಂಟ್ ಕಂಪಾರ್ಟ್‌ಮೆಂಟಿನಲ್ಲಿ ದಿವಾನ್ ಸ್ಟೇಷನ್‌ನಲ್ಲಿ ಕುಳಿತವನೊಬ್ಬನು ಲೇಡಿ ವಿಜಾರ್ಥರವರು ಆ ಹಣದ ಚೀಲ ತರುವುದಾಗಿ ಹೇಳಿದರೆಂದು ಸೇವಕನಿಂದ ತೆಗೆದುಕೊಂಡು ಪರಾರಿಯಾದನು. ಪೋಲೀಸ್ ತನಿಖೆಯಾಗುತ್ತಿದೆ.

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲೂ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ್ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕರ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯಷ್ಟಾಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು. ಮತ್ತು —

ಪಲ್ಲಭದಾಸ್ ತೇಜ್‌ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು
14 ಗೋಪಾಲಪ್ಪ ನಾಯಿಕ'ಬೀದಿ ಜಿ.ಟಿ ಮದರಾಸ್.

ಒರ್ಮನಿಯಲ್ಲಿ ಹುಟ್ಟಿ 50 ವರ್ಷಕ್ಕೆ ವಿಶ್ವವಿಖ್ಯಾತ ಅಮೇರಿಕಾದಲ್ಲಿ ಪ್ರಾಣವಾಗಿದ್ದ 89 ವರ್ಷದವನೊಬ್ಬನು 20 ಸಾವಿರ ಡಾಲರನ್ನು ಸರಕಾರಕ್ಕೆ ಕೊಟ್ಟ. ಏನೂ ಸಂಪಾದನೆ ಮಾಡಲಾರದ ಹತ್ತು ಮಂದಿಯನ್ನು ಕಾಪಾಡಲು ಉಪಯೋಗಿಸಬೇಕೆಂದಿರುವನು.

ಂ ಂ

ಬೊಂಬಾಯಿನಲ್ಲಿ ಇನ್ನು ಮುಂದೆ ನೂಲನ್ನು ನೆಯಿಗೆಯವರಿಗೆ ಸರಕಾರದವರೇ ಖುದ್ದು ಬಿಕರಿ ಮಾಡುವರು.

For Good Printing—
L. N. Press
Srirampet MYSORE

Good Coffee
Sastry's Coffee Rooms
Chamarajapuram, Mysore

1945
ಪಾಕೆಟ್ ಕ್ಯಾಲೆಂಡರ್
ಮತ್ತು
ಬಣ್ಣ ಚಿತ್ರಪಠಗಳ ವಾಲ್ ಕ್ಯಾಲೆಂಡರ್
ಬೇಕಾಗಿದೆ
— ವಿವರಗಳಿಗೆ —
ಚಿನ್ನ ಬೆಳ್ಳಿ ಮತ್ತು ದೇಶೀಯ ಔಷಧಿ ವ್ಯಾಪಾರಿಗಳು
ಜೆ. ಪ್ಯಾಟ್ .... ಮೈಸೂರು

ಅಕ್ಕರ

ಸಾ ಮಾ ಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಬೇಕಾಗಿದ್ದಾರೆ.

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜಂಟರುಗಳು ಬೇಕಾಗಿದ್ದಾರೆ. ಹೆಚ್ಚಿನ ವಿವಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

TALK-A-TONE
(The Pioneer Film-mag of S. India)
Local Agent—D. Mahadev
Opera Talkies, Mysore

ಮೈಸೂರು ರಣಜಿತ್ ಟಾಕೀಸಿನಲ್ಲಿ 4 ನೇ ವಾರ
At Ranjit ತಕದಿರ್
(ಹಿಂದಿ)
ಚಂದ್ರಮೋಹನ್ — ಮೋತಿಲಾಲ್ — ನರ್ಗೀಸ್
ಬಾಲಿ
ಮುಂತಾದವರು ಪಾತ್ರವಹಿಸಿರುವರು
— ದಿನವಹಿ ಮೂರು ಆಟಗಳು —

ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ
ಸೇವನೆಯೇ ಸುಲಭೋಪಾಯ
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.
ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಅಪೆರಾ ಟಾಕೀಸ್
ದೇವಕನ್ಯ
ಹೊನ್ನಪ್ಪ ಭಾಗವತರ್, ಯು. ಆರ್. ಜೀವರತ್ನಂ, ಟಿ. ಆರ್. ರಾಮಚಂದ್ರ
ಮುಂತಾದವರು ಪಾತ್ರವಹಿಸಿರುವರು.
ಪ್ರತಿದಿನ 3 ಆಟಗಳು
— ಶೀಘ್ರದಲ್ಲೇ ಬರುತ್ತದೆ —
ವೈ. ವಿ. ರಾವ್, ಕಮಲಾ ಕೊಟ್ನಿಸ್, ಭಾನುಮತಿ, ನಾರಾಯಣರಾವ್
ಪಾತ್ರವಹಿಸಿರುವ
ತಹಸಿಲ್ದಾರ್
(ತೆಲುಗು ಚಿತ್ರ)

ಅಂದವಾದ ಹೊಲಿಗೆಗೆ
ರೆಡಿಮೇಡ್ ಬಟ್ಟೆಗೆ
— ನಮ್ಮಲ್ಲಿ ಬನ್ನಿ —
ಶ್ರೀ ಮಹಾಲಕ್ಷ್ಮಿ ಹಾಲ್
ಸಯ್ಯಾಜಿರಾವ್ ರಸ್ತೆ, ಮೈಸೂರು

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 47-8-0
ಚಿನ್ನ ತೊಲ 1 ಕ್ಕೆ	68-12-0
ಬೆಳ್ಳಿ "	1-4-0

ಸತ್ಯವಾದಿ
— ವಾರದ ಸಂಚಿಕೆ —
ಪರವೂರಿಗೆ ವಾರ್ಷಿಕ ಚಂದಾ
ಅಂಚೆಪೆಟ್ಟಿ ಸೇರಿ ರೂ. 1-12-0

Edited, Printed and published by M. S. Krishna Rao, at the Satyavadi Press, Chamaraja Agrahar, Mysore